# ನವರಾತ್ರಿಯ ನವದರ್ಶನ

ವಿಜಯ ಭಾರತಿ

ನವರಾತ್ರಿ ಉತ್ಸವದ ವೈಶಿಷ್ಟ್ಯವನ್ನೂ ದೇವಿಯ ವಿವಿಧ ಭಾವಗಳ ವಿಶೇಷಾರ್ಥವನ್ನೂ ವಿವರಿಸಿರುವ ಶ್ರೀಮತಿ ವಿಜಯ ಭಾರತಿಯವರು ತಮ್ಮ ಬರಹಗಳು ಮತ್ತು ಉಪನ್ಯಾಸಗಳ ಮೂಲಕ ಶ್ರೀರಾಮಕೃಷ್ಣ ಭಕ್ತವೃಂದದಲ್ಲಿ ಬಹುಪರಿಚಿತರಾಗಿದ್ದಾರೆ.

ತಾಯಿಗರ್ಭದಿಂದ ಈ ಲೋಕಕ್ಕೆ ಬಂದ ಕ್ಷಣದಿಂದ ನಾವು ಮಾತೃಪ್ರೇಮದ ಅಮೃತ ಸಿಂಚನದಿಂದಲೇ ಬೆಳೆಯುತ್ತ ಹೋಗುತ್ತೇವೆ. ನಾವು ಬೆಳೆದಂತೆಲ್ಲ ಆ ಪ್ರೇಮಸ್ವರೂಪವೂ ಬೆಳೆಯುತ್ತಾ ವಿಸ್ತೃತವಾಗುತ್ತಾ ಹೋಗುತ್ತದೆ. ಹುಟ್ಟಿದ ನಾಡು ತಾಯ್ನಾಡಾಗುತ್ತದೆ. ಭೂಮಂಡಲ ಭೂಮಾತೆಯಾಗುತ್ತಾಳೆ. ಸೂರ್ಯಮಂಡಲದಲ್ಲಿ ಅರುಣೆ ಕಾಣುತ್ತಾಳೆ. ಚಂದ್ರಮಂಡಲದಲ್ಲಿ ತಂಬೆಳಕಿನ ಶೀತಲಾ ಗೋಚರಿಸುತ್ತಾಳೆ. ಸುತ್ತಲಿನ ನಿಸರ್ಗವೆಲ್ಲ ಪ್ರಕೃತಿಮಾತೆಯಾಗಿ ಕಾಣಲಾರಂಭಿಸುತ್ತಾಳೆ. ಅವಳು ಭೀಕರಳಾದಾಗ ಕಾಳಿಯಾಗುತ್ತಾಳೆ, ಸೌಮ್ಯಳಾದಾಗ ಲಲಿತೆಯಾಗುತ್ತಾಳೆ. ಅವಳ ಈ ದ್ವಿಮುಖ ರೂಪವನ್ನು ಕಂಡು ನಾವು ಅಚ್ಚರಿಗೊಳ್ಳುತ್ತೇವೆ.

ಭಾರತದಲ್ಲಿ ಹಬ್ಬಗಳು ದಸರಾ ಜಂಬೂಸವಾರಿಯಂತೆಯೆ ಸುದೀರ್ಘ ಮೆರವಣಿಗೆಯ ಸಾಲಾಗಿ ವರ್ಷವಿಡೀ ಬರುತ್ತಲೇ ಹೋಗುತ್ತವೆ. ನಮ್ಮ ಹಿರಿಯರು ಒಂದಲ್ಲ ಒಂದು ರೀತಿಯಲ್ಲಿ ಭಗವಂತನ ಸ್ಮರಣೆ ಉಪಾಸನೆಗಳನ್ನು ನಾವು ನಡೆಸಲಿ ಎಂಬ ಉದ್ದೇಶದಿಂದ ಇವನ್ನು ಆಚರಣೆಗೆ ತಂದರು. ಆದರೆ ಅವು ಕೇವಲ ತೋರಿಕೆಯ ಸಡಗರವಾಗಿ, ಅರ್ಥ ತಿಳಿಯದ ಕಟ್ಟುಪಾಡಿನ ಸಿಕ್ಕುಗೋಜಲುಗಳಿಗೆ ಸಿಲುಕಿ, ದೈವಿಕತೆಯ ದೀಪ್ತಿ ಮಸುಕಾಗಿರುವ ಸಂದರ್ಭಗಳೇ ಹೆಚ್ಚು. ಒಳತಿರುಳನ್ನು ಅರಿತು ಭಕ್ತಿ ಭಾವ ಸಮನ್ವಿತರಾಗಿ ಸರಳರೀತಿಯಲ್ಲಿ ಆಚರಿಸಿ ಆತ್ಮೋನ್ನತಿಯ ಸಾರ್ಥಕತೆಯನ್ನು ಪಡೆದುಕೊಳ್ಳುವವರು ಕೆಲವೇ ಮಂದಿ.

ಹಬ್ಬಗಳಲ್ಲೆಲ್ಲಾ ನವರಾತ್ರಿ ಅತ್ಯಂತ ದೀರ್ಘವಾದ ಹಬ್ಬ. ಮಾತೃತ್ವದ ಹಿರಿಮೆಗೆ ಮಾನವಲೋಕ ಕೊಟ್ಟಿರುವ ಅಗ್ರ ಮಾನ್ಯತೆಯನ್ನು ಇದು ಸೂಚಿಸುತ್ತದೆ. ಶಿವರಾತ್ರಿ, ನವರಾತ್ರಿ, ಗೋಕುಲಾಷ್ಟಮಿ, ದೀಪಾವಳಿ ಇವೆಲ್ಲ ರಾತ್ರಿಯ ವಿಶೇಷತೆಯೊಂದಿಗೇ ಆಚರಣೆಗೆ ಒಳಪಟ್ಟಿರುವುದು ಒಂದು ವಿಶೇಷವೆಂದೇ ಹೇಳಬಹುದು. ಒಂದು ಕಾಲಮಾನ ಅಳಿದು ಅಂದರೆ ಲಯವಾಗಿ ಇನ್ನೊಂದು ಕಾಲಮಾನದ ಸೃಷ್ಟಿಗೆ ಅಣಿಯಾಗುವ ಅವಧಿಯೇ ರಾತ್ರಿ. ಲಯಕಾರಕನಾದ ಶಿವ, ಸೃಷ್ಟಿಸ್ವರೂಪಳಾದ ತಾಯಿ, ಅಸುರಸಂಹಾರಕನಾದ ಶ್ರೀಕೃಷ್ಣ ಇವರನ್ನು ರಾತ್ರಿಯೊಂದಿಗೇ ಸ್ಮರಿಸಿ ಆರಾಧಿಸುವುದು ಔಚಿತ್ಯಪೂರ್ಣವಾಗಿದೆ.


ನವರಾತ್ರಿಯ ಆರಂಭಕ್ಕೆ ಮೊದಲು ಬರುವ ಮಹಾಲಯ ಅಮಾವಾಸ್ಯೆ ಕತ್ತಲಿನ ಮಹತ್ತನ್ನು ಎತ್ತಿ ಹಿಡಿಯುತ್ತದೆ. ಆ ದಿನದ ರಾತ್ರಿ ಕಾಲಸ್ವರೂಪಿಣಿಯಾದ ಮಹಾಕಾಳಿ ತನ್ನ ಮಹಾ ಗರ್ಭದಲ್ಲಿ ಎಲ್ಲವನ್ನು ಲಯ ಮಾಡಿಕೊಂಡು ಸರ್ವ ದೇವ ದೇವಿಯರ ಎಲ್ಲ ಸತ್ವವನ್ನೂ ತನ್ನಲ್ಲಿ ಆವಾಹಿಸಿಕೊಂಡು ಮುಂದಿನ ತನ್ನ ವಿಶೇಷ ಸ್ವರೂಪದ ಸೃಷ್ಟಿಗೆ ಅಣಿಯಾಗುತ್ತಾಳೆ. ನವರಾತ್ರಿಯಲ್ಲಿ ದೇವಿಯನ್ನು ಹಲವಾರು ಸ್ವರೂಪಗಳಲ್ಲಿ ಆರಾಧಿಸುತ್ತೇವೆ. ಶಕ್ತಿ ಸ್ವರೂಪಿಣಿಯಾದ ಕಾಳಿ, ಜ್ಞಾನಸ್ವರೂಪಿಣಿಯಾದ ಸರಸ್ವತಿ, ಸಂಪತ್‌ಸ್ವರೂಪಿಣಿಯಾದ ಲಕ್ಷ್ಮೀ, ಪ್ರೇಮಸ್ವರೂಪಿಣಿಯಾದ ರಾಧೆ ಇವು ಪ್ರಮುಖವಾದ ಸ್ವರೂಪಗಳು. ಈ ಸ್ವರೂಪಗಳಲ್ಲದೆ ನವದುರ್ಗಾ [ಶೈಲಪುತ್ರೀ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯನೀ, ಕಾಲರಾತ್ರೀ, ಮಹಾಗೌರೀ, ಸಿದ್ಧಿದಾತ್ರೀ] ಸಪ್ತಮಾತೃಕಾ [ಬ್ರಹ್ಮಾಣಿ, ಮಾಹೇಶ್ವರಿ, ಕೌಮಾರಿ, ವೈಷ್ಣವೀ, ವಾರಾಹಿ, ಇಂದ್ರಾಣಿ, ಚಾಮುಂಡಾ] ಸಪ್ತಯೋಗಿನಿ [ಡಾಕಿನೀ, ರಾಕಿನೀ, ಲಾಕಿನೀ, ಕಾಕಿನೀ, ಸಾಕಿನೀ, ಹಾಕಿನೀ, ಯಾಕಿನೀ] ಸ್ವರೂಪಗಳೂ ಭಕ್ತರಿಂದ ಈ ಸಮಯದಲ್ಲಿ ಪೂಜಿತವಾಗುವುದುಂಟು. ಈ ಎಲ್ಲದರ ಸಮಷ್ಟಿರೂಪವಾಗಿ ಸಿಂಹವಾಹಿನಿ ದುರ್ಗೆ ಪ್ರಮುಖವಾಗಿ ಆರಾಧಿತಳಾಗುತ್ತಾಳೆ.

ದೇವಿಯ ಮಹಿಮೆಯನ್ನು ವರ್ಣಿಸುವ ದುರ್ಗಾಸಪ್ತಶತಿ, ದೇವೀಭಾಗವತ, ದೇವೀ ಸಹಸ್ರನಾಮ, ಶ್ರೀಶಂಕರಾಚಾರ್ಯರ ಸೌಂದರ್ಯಲಹರಿ ಮುಂತಾದ ಪವಿತ್ರಗ್ರಂಥಗಳ ಪಾರಾಯಣ ಈ ಹತ್ತೂ ದಿನಗಳಲ್ಲಿ ನಿರಂತರವಾಗಿ ನಡೆಯುತ್ತದೆ. ಇವಲ್ಲದೆ ತ್ರಿಪುರಾರಹಸ್ಯದ ಅಧ್ಯಯನವೂ ನಡೆಯುವುದುಂಟು. ಈ ಎಲ್ಲ ಪಾರಾಯಣ, ಪ್ರವಚನಾದಿಗಳೊಂದಿಗೆ ಶ್ರೀರಾಮಾಯಣ ಪಾರಾಯಣ ಮತ್ತು ಶ್ರೀತಾರಕನಾಮಜಪವೂ ನಡೆಯುತ್ತದೆ. ರಾವಣನ ಸಂಹಾರವಾದುದು ವಿಜಯದಶಮಿಯಂದು. ಶ್ರೀರಾಮನಿಗೆ ಪ್ರಾಪ್ತವಾದ ಈ ವಿಜಯವು ಶ್ರೀಜಗನ್ಮಾತೆಯ ಆರಾಧನೆಯ ಫಲ ಎಂಬ ಪ್ರತೀತಿ ಇದೆ.

ಶ್ರೀಮಾತೆಯನ್ನು ಪ್ರತಿಮಾರೂಪದಲ್ಲಿ ಗ್ರಂಥರೂಪದಲ್ಲಿ ಅಲ್ಲದೆ, ಶ್ರೀಚಕ್ರದ ರೂಪದಲ್ಲಿಯೂ ನವರಾತ್ರಿಯ ಸಮಯದಲ್ಲಿ ಪೂಜಿಸುವುದುಂಟು. ಶ್ರೀವಿದ್ಯಾ ಉಪಾಸಕರು ಮಹಾಮಾತೆಯನ್ನು ಶ್ರೀಚಕ್ರದಲ್ಲಿ ಆವಾಹಿಸಿ ಆರಾಧಿಸುವ ಪದ್ಧತಿ ಬಹಳ ಕಡೆಗಳಲ್ಲಿ ಆಚರಣೆಯಲ್ಲಿದೆ. ಶ್ರೀಶಂಕರಭಗವತ್ಪಾದರು ಶೃಂಗೇರಿ, ಕೊಲ್ಲೂರು, ಕಂಚಿ ಮುಂತಾದ ದೇವೀಸ್ಥಾನಗಳಲ್ಲಿ ಶ್ರೀಚಕ್ರ ಸ್ಥಾಪನೆಯನ್ನು ಮಾಡಿರುವುದು ಅದರಲ್ಲಿನ ಮಹತ್ವದ ಅರಿವು ಭಕ್ತರಿಗಾಗಲಿ ಎಂಬ ಉದ್ದೇಶದಿಂದಲೇ. ನವಾವರಣಗಳ ಈ ಮಹಾಮಂಡಲ ಆದ್ಯಾಶಕ್ತಿಯ ಅತ್ಯಂತ ಜಾಜ್ವಲ್ಯಮಾನವಾದ ಶಕ್ತಿತರಂಗಗಳ ಸಂಚಾರದಿಂದ ಸಮನ್ವಿತವಾಗಿದೆ. ದೇವಿಯ

ಎಲ್ಲ ಸ್ವರೂಪಗಳೂ ಅದರಲ್ಲಿ ಅಂತರ್ಗತವಾಗಿದೆ. ತಂತ್ರ ಸಾಧನೆಯಲ್ಲಿ ಪ್ರಾಚೀನ ಕಾಲದಿಂದ ಇದರ ಆರಾಧನೆಯ ಆಚರಣೆ ನಡೆದು ಬಂದಿದೆ. ದೇವಿಯ ವಿವಿಧ ಸ್ವರೂಪದ ಸಾನ್ನಿಧ್ಯವಷ್ಟೇ ಅಲ್ಲದೆ ಸಾಧಕನ ಸಾಧನಾಪಥದ ಆವರಣ ಗಳನ್ನೂ ಇದು ಪ್ರತಿನಿಧಿಸುತ್ತದೆ.

ಮೊದಲನೆಯ ಆವರಣವಾದ ಭೂಪುರತ್ರಯ ಶ್ವೇತವಿದ್ರುಮವು ಪೀತವರ್ಣದ್ದಾಗಿದ್ದು ಇಚ್ಛಾ, ಕ್ರಿಯಾ ಮತ್ತು ಜ್ಞಾನಶಕ್ತಿ ಗಳನ್ನು ಸೂಚಿಸುತ್ತದೆ. ಇದು ತ್ರೈಲೋಕ್ಯಮೋಹನಚಕ್ರ. ಎರಡನೆಯದಾದ ಹದಿನಾರು ದಲ ಕಮಲವು ದೇವಿಯ ಷೋಡಶ ಕಲೆ ಗಳನ್ನು ಒಳಗೊಂಡಿದೆ. ಇದು ಸರ್ವಾಶಾಪರಿಪೂರಕ ಚಕ್ರ. ಮೂರನೆಯದು ಎಂಟುಕಮಲದಲಗಳು—ತಾಯಿ ಇಲ್ಲಿ ಅಷ್ಟ ಯೋಗಿನಿ ಸ್ವರೂಪದಲ್ಲಿ ವಾಸಿಸುತ್ತಾಳೆ. ಇದು ಸರ್ವ ಸಂಕ್ಷೋಭಣ ಚಕ್ರ. ನಾಲ್ಕನೆಯದು ಹದಿನಾಲ್ಕು ತ್ರಿಕೋಣಗಳ ಆವರಣ, ಹದಿನಾಲ್ಕು ಲೋಕಗಳಲ್ಲಿ ವ್ಯಾಪ್ತ ವಾಗಿರುವ ದೇವಿಸ್ವರೂಪ. ಇದು ಸರ್ವ ಸೌಭಾಗ್ಯದಾಯಕ ಚಕ್ರ. ಐದನೆಯದು ಬಹಿರ್ದಶಾರ–ಹತ್ತು ತ್ರಿಕೋಣಗಳ ಆವರಣ—ದೇವಿಯ ದಶಮಹಾವಿದ್ಯಾ ಸ್ವರೂಪದ ಸಾನ್ನಿಧ್ಯ. ಇದು ಸರ್ವಾರ್ಥಸಾಧಕ ಚಕ್ರ. ಆರನೆಯದು ಅಂತರ್ದಶಾರ – ಒಳಗಿನ ಹತ್ತು ತ್ರಿಕೋಣದಳ – ಪಂಚಭೂತ ಮತ್ತು ಪಂಚತನ್ಮಾತ್ರಾ ಸ್ವರೂಪಿಣಿಯ ಸ್ಥಾನ. ಇದು ಸರ್ವರಕ್ಷಾಕರ ಚಕ್ರ. ಏಳನೆಯದು ಅಷ್ಟದಳ ಅಷ್ಟದಿಗ್‌ದೇವತಾಸ್ವರೂಪ. ಇದು ಸರ್ವರೋಗಹರಚಕ್ರ. ಎಂಟನೆಯದು ಏಕತ್ರಿಕೋನ— ಸೂರ್ಯ-ಚಂದ್ರ-ಅಗ್ನಿತತ್ತ್ವಸ್ವರೂಪ. ಇದು ಸರ್ವಸಿದ್ಧಿಪ್ರದ ಚಕ್ರ. ಒಂಭತ್ತನೆಯದು ಮಹಾಬಿಂದು– ಆನಂದಬಿಂದು – ಶಿವಶಕ್ತಿ ತತ್ವಬಿಂದು. ಇದು ಸರ್ವಾನಂದಮಯ ಚಕ್ರ.



ಸಂಗೀತಕ್ಷೇತ್ರದ ತ್ರಿಮೂರ್ತಿಗಳಲ್ಲಿ ಒಬ್ಬರಾದ ಮುತ್ತುಸ್ವಾಮಿ ದೀಕ್ಷಿತರು ಪರಮಶ್ರೇಷ್ಠ ಶ್ರೀಚಕ್ರ ಮತ್ತು ಶ್ರೀವಿದ್ಯಾ ಉಪಾಸಕರು. ಅವರು ಈ ಎಲ್ಲಾ ನವಾವರಣಗಳಲ್ಲಿರುವ ತಾಯಿಯನ್ನು ಅರ್ಥಪೂರ್ಣವಾಗಿ, ಭಕ್ತಿಭಾವ ಸಮನ್ವಿತವಾಗಿ, ಆ ಭಾವಕ್ಕೆ ಉಚಿತವಾದ ಶ್ರೇಷ್ಠರಾಗಗಳಲ್ಲಿ ಕೃತಿಗಳನ್ನು ರಚಿಸಿ ಹಾಡಿದ್ದಾರೆ. ಸಂಗೀತಲೋಕದಲ್ಲಿ ನವಾವರಣ ಕೃತಿಗಳೆಂದೇ ಇವು ಪ್ರಖ್ಯಾತವಾಗಿವೆ. ಸದ್ಗುರು ಚಿದಂಬರಯೋಗಿಗಳಿಂದ ಮಂತ್ರ ದೀಕ್ಷಿತರಾಗಿ ಸಾಧನೆ ನಡೆಸಿ ಸಿದ್ಧಿಪಡೆದುಕೊಂಡ ಇವರು ಒಬ್ಬ ಗಾನಯೋಗಿ. ಈ ಮಹಾಮಹಿಮರ ದೇವೀಕೃತಿಗಳನ್ನು ನವ ರಾತ್ರಿಯ ಸಂದರ್ಭದಲ್ಲಿ ಗಾಯಕರು ಉಪಾಸನಾ ಭಾವದಲ್ಲಿ ದೇವಿಯ ಸನ್ನಿಧಿಯಲ್ಲಿ ಹಾಡುತ್ತಾರೆ.

ಇಷ್ಟೆಲ್ಲ ವಿಧಿವಿಧಾನಗಳಲ್ಲಿ ಮಾತೃಆರಾಧನೆ ನವರಾತ್ರಿಯ ಸಮಯದಲ್ಲಿ ನಡೆಯುವುದರ ಹಿಂದೆ ವಿಶೇಷವಾದ ಅರ್ಥವಿರುವುದು ಗಮನಾರ್ಹ. ಮೊದಲನೆಯದು ವಿಶ್ವಮಾತೆ ಯಾಗಿ ಅವಳನ್ನು ಆರಾಧಿಸುವುದು. ಎರಡನೆಯದಾಗಿ, ಬ್ರಹ್ಮಾಂಡದಲ್ಲಿಯೂ, ಮಾನವಶರೀರದಲ್ಲಿಯೂ ಕುಂಡಲಿನೀ ಸ್ವರೂಪಿಣಿಯಾಗಿ ನೆಲೆಸಿರುವ ದೇವಿಯ ಯೌಗಿಕ ಶಕ್ತಿಯ ಉಪಾಸನೆ. ಮೂರನೆಯದಾಗಿ ದೇವಿಯನ್ನು ಸಾಕ್ಷಾತ್ಕರಿಸಿ ಕೊಂಡಿರುವ ಅವಳ ಅಂತರಂಗ ಭಕ್ತರ ಪುಣ್ಯಸ್ಮರಣೆ. ಇವು ನವರಾತ್ರಿಯ ಆಚರಣೆಯ ಪ್ರಮುಖ ಉದ್ದೇಶಗಳಾಗಿವೆ.

ಮಾತೃಆರಾಧಕರ ಮಹಾಭಾವ, ಅವರ ದರ್ಶನಾನುಭವ, ಅವರು ರಚಿಸಿದ ಸ್ತೋತ್ರ ಮಾಲಿಕೆಯ ಸಾಹಿತ್ಯಸೌಂದರ್ಯ, ಅವರ ಪುಣ್ಯಜೀವನದ ವೈಶಿಷ್ಟ್ಯ ಇವೆಲ್ಲದರ ಚಿಂತನೆಯಿಂದ ನಮ್ಮ ಹೃದಯ ಆರ್ದ್ರವಾದಾಗ, ನಾವು ಮಾಡುವ ನವರಾತ್ರಿಯ ಪೂಜೆ, ಆರಾಧನೆಗಳಲ್ಲಿ ಒಂದು ವಿಶೇಷವಾದ ಆನಂದಾನುಭವ ಉಂಟಾಗುತ್ತದೆ; ಆ ಭಕ್ತರ ಭಕ್ತಿಯ ಸುಗಂಧ ಸೌರಭ ಅಂತರ್ಯವನ್ನು ತುಂಬಿತುಳುಕುತ್ತದೆ. ಧನ್ಯಭಾವ ತಾನೇತಾನಾಗಿ ಅರಳುತ್ತದೆ.

ಬ್ರಹ್ಮಜ್ಞಾನಿ ರಮಣ ಮಹರ್ಷಿಗಳು ಪರಬ್ರಹ್ಮನನ್ನು ನಿರಾಕಾರ ಭಾವದಲ್ಲಿ ಸಾಕ್ಷಾತ್ಕರಿಸಿಕೊಂಡ ಮಹಾನುಭಾವರೆಂಬುದು ಹೆಚ್ಚು ಪ್ರಚಲಿತವಾಗಿದೆ. ಆದರೆ ಅವರು ಜಗನ್ಮಾತೆಯ ಉಪಾಸಕರೆಂಬ ಅಂಶ ಗುಪ್ತವಾಗಿಯೇ ಉಳಿದಿದೆ. ರಮಣರಿಗೆ ರಮಣಮಹರ್ಷಿ ಎಂದು ನಾಮಾಂಕಿತ ಮಾಡಿದವರೂ ಅವರ ಅಂತರಂಗ ಶಿಷ್ಯರೂ ಆಗಿದ್ದ ಶ್ರೀ ವಾಸಿಷ್ಠ ಗಣಪತಿ ಮುನಿಗಳು ರಮಣರ ಪ್ರೇರಣೆ ಮತ್ತು ಗುಪ್ತ ಮಾರ್ಗ ದರ್ಶನದಲ್ಲಿ ರಚಿಸಿರುವ "ಉಮಾ ಸಹಸ್ರಮ್" ಎಂಬ ಅದ್ಭುತ ಸ್ತೋತ್ರಕೃತಿಯೇ ಇದಕ್ಕೆ ಸಾಕ್ಷಿಯಾಗಿದೆ. ಪಿಂಡಾಂಡದಿಂದ ಬ್ರಹ್ಮಾಂಡದವರೆಗೆ ವ್ಯಾಪ್ತವಾಗಿರುವ ತಾಯಿಯ ವಿಶ್ವರೂಪ ದರ್ಶನವನ್ನು ಅವರು ಇಲ್ಲಿ ಮಾಡಿಸಿದ್ದಾರೆ. ಗಣಪತಿಮುನಿಗಳು ಪ್ರಕಾಂಡ ಪಂಡಿತರು, ಮಹಾಯೋಗಿಗಳು. ತಮಗೆ ಆದ ದೇವಿಯ ಮಹಾದರ್ಶನದ ದಿವ್ಯಾನುಭವವನ್ನು ಅವರು ಈ ಸಹಸ್ರಶ್ಲೋಕಗಳ ಮೂಲಕ ಬೆಳಕಿನ ಹೊಳೆಯಾಗಿ ಹರಿಸಿದ್ದಾರೆ.

**ಖಂ ಕ್ರೀಡಾಭವನಂ ತೇ ಕಃ ಕಾರ್ಯಾಲಯ ಏಷಃ |**
**ಪೃಥ್ವೀಯಂ ಬಹುಲಾನ್ನಾ ಮಾತರ್ಭೋಜನಶಾಲಾ ||**

"ಇಡೀ ಅಂತರಿಕ್ಷವೇ ವಿಶ್ವಮಾತೆಯ ವಿಹಾರ ಸ್ಥಳ. ಸೂರ್ಯ ಮಂಡಲವೇ ಅವಳ ಕಾರ್ಯಾಲಯ, ಬಹು ಆಹಾರಪದಾರ್ಥ ಗಳಿಂದ ಕೂಡಿದ ಭೂಮಂಡಲವೆಲ್ಲವೂ ಅವಳ ಪಾಕಶಾಲೆ."

ಇಲ್ಲಿ ವ್ಯಕ್ತವಾಗಿರುವ ಅರ್ಥವ್ಯಾಪ್ತಿ ಎಷ್ಟು ಬೃಹತ್ತಾದುದು ಎಂಬುದನ್ನು ಕಾಣಬಹುದು. ಮೂರು ಲೋಕಗಳಲ್ಲಿಯೂ ನೆಲೆಗೊಂಡಿರುವ ಜಗಜ್ಜನನಿಯ ಮೂರು ಸ್ವರೂಪಗಳನ್ನು ಗಣಪತಿ ಮುನಿ ಇಲ್ಲಿ ಸಾಕಾರಗೊಳಿಸಿದ್ದಾರೆ. ಪರಬ್ರಹ್ಮನಲ್ಲಿ ಮೂಲಮಾಯೆಯಾಗಿ, ಭೋಗಲೋಕಗಳಲ್ಲಿ ಜಾಲಮಾಯೆಯಾಗಿ, ಕಾಲರೂಪನಾದ ಆದಿತ್ಯನಲ್ಲಿ ಯೋಗಮಾಯೆಯಾಗಿ, ಸಂಸಾರಾಸಕ್ತರಲ್ಲಿ ಪಾಶಮಾಯೆಯಾಗಿ ತನ್ನ ಲೀಲಾವಿಲಾಸವನ್ನು ನಡೆಸುತ್ತಿರುವ ಮಹಾಮಾಯೆಯನ್ನು ಆರಾಧಿಸುವ ಸಾಧಕರಿಗೆ ಅವಳು ವಿವಿಧಸ್ತರಗಳಲ್ಲಿ ವಿವಿಧ ರೂಪಗಳಲ್ಲಿ ಕಾಣಿಸಿಕೊಂಡು ಆನಂದವನ್ನು ನೀಡುತ್ತಾಳೆ.

ಅರ್ಚನಕಾಲೇ ರೂಪಗತಾ ಸಂಸ್ತುತಿಕಾಲೇ ಶಬ್ದಗತಾ ।
ಚಿಂತನಕಾಲೇ ಪ್ರಾಣಗತಾ ತತ್ತ್ವವಿಚಾರೇ ಸರ್ವಗತಾ ॥

ಪುಷ್ಪಚಂದನಗಳಿಂದ ಅರ್ಚಿಸುವಾಗ ತಾಯಿಯು ದಿವ್ಯರೂಪದಲ್ಲಿಯೂ, ಅವಳನ್ನು ಸ್ತುತಿಸುವಾಗ ಪದಗಳ ಅರ್ಥಸೌಂದರ್ಯದಲ್ಲಿಯೂ, ಚಿಂತಿಸುವಾಗ ಹೃದಯಾಂತರಾಳದಲ್ಲಿಯೂ ನೆಲೆಸಿರುತ್ತಾಳೆ. ಸ್ವರೂಪವೂ ಅವಳೇ, ಸ್ತುತಿಯೂ ಅವಳೇ, ಸ್ತುತಿಯಲ್ಲಿನ ಅರ್ಥವೂ ಅವಳೇ, ಅರ್ಥಾನುಭವನಿಮಗ್ನವಾದ ಅಂತರ್ಯದಲ್ಲಿರುವವಳೂ ಅವಳೇ ಎಂಬ ತತ್ತ್ವ ಅರಿವಾದಾಗ ಎಲ್ಲೆಡೆಯೂ ಅವಳೇ ಕಾಣಬರುತ್ತಾಳೆ. ಇದು ಗಣಪತಿ ಮುನಿಗಳು ಜಗನ್ಮಾತೆಯನ್ನು ಕಂಡಿರುವ ರೀತಿ.

ವಿಶ್ವವನ್ನು ಆಳುತ್ತಿರುವ ಲೋಕಮಾತೆಯನ್ನು ಸಾಧಕರು ಹತ್ತು ಸ್ವರೂಪಗಳಲ್ಲಿ ಕಂಡಿದ್ದಾರೆ. ಇದನ್ನು "ದಶಮಹಾವಿದ್ಯಾ" ಎನ್ನುತ್ತಾರೆ. ಮೊದಲನೆಯದಾಗಿ ಕಾಳಿ — ಕಾಲಸ್ವರೂಪಿಣಿ, ಎರಡನೆಯದಾಗಿ ತಾರಾ — ಪ್ರಣವಸ್ವರೂಪಿಣಿ, ಶಬ್ದಸಂಚಾಲಕಿ, ಮೂರನೆಯದಾಗಿ ತ್ರಿಪುರಸುಂದರಿ — ಸೌಂದರ್ಯದ ಅಧಿದೇವತೆ, ನಾಲ್ಕನೆಯದಾಗಿ ಭುವನೇಶ್ವರಿ— ಲೋಕಸಾಮ್ರಾಜ್ಞೀ, ಐದನೆಯದಾಗಿ ಭೈರವಿ — ತೇಜೋಸ್ವರೂಪಿಣಿ, ಆರನೆಯದಾಗಿ ಛಿನ್ನಮಸ್ತಾ — ಆಸುರೀಶಕ್ತಿಯನ್ನು ದಮನಮಾಡುವವಳು, ಏಳನೆಯದಾಗಿ ಧೂಮವತಿ — ಮನುಷ್ಯನ ಅಹಂಅನ್ನು ನಿಶ್ಶೇಷಗೊಳಿಸುವ ದಂಡಿನೀ, ಎಂಟನೆಯದಾಗಿ ಬಗಲಾಮುಖಿ — ದೈವಶಕ್ತಿಗೆ ಮಾರಕವಾದುದನ್ನು ಸ್ತಂಭನಗೊಳಿಸುವವಳು, ಒಂಭತ್ತನೆಯದಾಗಿ ಮಾತಂಗಿ — ವಾಕ್‌ಶಕ್ತಿ ಪ್ರದಾಯಿನಿ, ಹತ್ತನೆಯದಾಗಿ ಕಮಲಾತ್ಮಿಕಾ — ಸಂಪತ್ ಸ್ವರೂಪಿಣಿ. ಇವಿಷ್ಟೂ ಸಾಧಕರು ಕಂಡಿರುವ ವಿಶ್ವಮಾತೆಯ ಬೃಹತ್ ಸ್ವರೂಪದರ್ಶನ.

ಪರಮಹಂಸ ಶ್ರೀರಾಮಕೃಷ್ಣರು ಮಹಾಮಾತೆಯ ಈ ಹತ್ತೂ ಸ್ವರೂಪಗಳನ್ನೂ ಸಾಕ್ಷಾತ್ಕರಿಸಿಕೊಂಡು ಅವೆಲ್ಲವನ್ನೂ ಭವತಾರಿಣಿ ಕಾಳಿಯಲ್ಲಿ ಐಕ್ಯಗೊಳಿಸಿಕೊಂಡವರು. ಅವರ ಈ ಸಾಧನಾ ಕಾರ್ಯದ ಹಿಂದೆ ನಿಗೂಢ ರಹಸ್ಯವಿದೆ. ಆ ರಹಸ್ಯ ಅಧ್ಯಯನಕ್ಕೆ ನಿಲುಕುವಂತಹುದಲ್ಲ; ಆಳವಾದ ಧ್ಯಾನಗಮ್ಯವಾದ ಚಿಂತನೆಗೆ ಮಾತ್ರ ನಿಲುಕುವಂತಹುದು.

"ಪರಮಹಂಸ ರಾಮಕೃಷ್ಣರು ತೋರಿದ ದೈವೀಪ್ರೇಮ, ನೀಡಿದ ದೈವೀ ಆನಂದ ಮಾನವ ಜಗತ್ತಿಗೆ ಅವರ ಮೂಲಕ ತಾಯಿ ಕಾಳಿಯು ನೀಡಿದ ಪರಮಶ್ರೇಷ್ಠ ಕೊಡುಗೆ. ತನ್ನ ಸಂದೇಶವನ್ನು ವಿಶ್ವಮಾತೆ ಅವರ ಮೂಲಕ ಬಿತ್ತರಿಸಿದಳು."

—ಡೇವಿಡ್ ಫ್ರ್ಯಾಲಿ

ಪ್ರಸಿದ್ಧ ಪಾಶ್ಚಾತ್ಯ ವಿದ್ವಾಂಸರಾದ ಡೇವಿಡ್ ಫ್ರ್ಯಾಲಿಯವರು ಶ್ರೀರಮಣರಲ್ಲಿ ಮತ್ತು ಶ್ರೀರಾಮಕೃಷ್ಣರಲ್ಲಿ ಅತ್ಯಂತ ಭಕ್ತಿಶ್ರದ್ಧೆ ಉಳ್ಳವರು. ಅವರಿಬ್ಬರ ಉಪದೇಶಗಳನ್ನು ಆಳವಾಗಿ ತಮ್ಮ ಅಂತರ್ಯದಲ್ಲಿ ಬೇರಿಳಿಸಿಕೊಂಡವರು. ಸನಾತನ ಧರ್ಮದ ಅಧ್ಯಯನಕ್ಕೆ ತಮ್ಮನ್ನು ತಾವು ಮೀಸಲಾಗಿರಿಸಿಕೊಂಡವರು. ಭಾರತೀಯ ಜ್ಯೋತಿಶ್ಶಾಸ್ತ್ರ ಆಯುರ್ವೇದಗಳಲ್ಲಿ ಉನ್ನತ ಮಟ್ಟದ ಜ್ಞಾನ ಉಳ್ಳವರು. ಅವರು ತಮ್ಮ ಮೊದಲಿನ ಹೆಸರಿನೊಡನೆ ವಾಮನ ಶಾಸ್ತ್ರೀ ಎಂಬ ಭಾರತೀಯ ನಾಮಧೇಯವನ್ನೂ ಇರಿಸಿಕೊಂಡಿದ್ದಾರೆ. ಶ್ರೀರಾಮಕೃಷ್ಣರ ಮಾತೃಆರಾಧನೆಯನ್ನು ಕುರಿತ ಅವರ ಆಲೋಚನೆ ಬಹಳ ಮೌಲ್ಯಯುತವಾದದ್ದು. ಅವು ಹೀಗಿವೆ:

"ಪರಮಹಂಸ ರಾಮಕೃಷ್ಣರು ತೋರಿದ ದೈವೀಪ್ರೇಮ, ನೀಡಿದ ದೈವೀ ಆನಂದ ಮಾನವಜಗತ್ತಿಗೆ ಅವರ ಮೂಲಕ ತಾಯಿ ಕಾಳಿಯು ನೀಡಿದ ಪರಮಶ್ರೇಷ್ಠ ಕೊಡುಗೆ. ತನ್ನ ಸಂದೇಶವನ್ನು ವಿಶ್ವಮಾತೆ ಅವರ ಮೂಲಕ ಬಿತ್ತರಿಸಿದಳು. ಆದರಿಂದಾಗಿಯೇ ಅವರ ಉಪದೇಶ 'ಮಾತೃಸಮ್ಮಿತ'ವಾಯಿತು. ಆಧುನಿಕ ಜಗತ್ತಿನ ಆಧ್ಯಾತ್ಮಿಕ ಶಕ್ತಿಯನ್ನು ಅತ್ಯಂತ ತೀವ್ರವಾಗಿ ಪರಮಶ್ರೇಷ್ಠ ರೀತಿಯಲ್ಲಿ ಜಾಗೃತಗೊಳಿಸಿದ ರಾಮಕೃಷ್ಣರು ಆದ್ಯಾಶಕ್ತಿಯ ಮತ್ತೊಂದು ರೂಪವಷ್ಟೇ. ಅವರು ಭವತಾರಿಣಿ ಕಾಳಿಯ ಮೂಲಕ ಜಗಜ್ಜನನಿಯ ಎಲ್ಲ ದಶಮಹಾವಿದ್ಯಾ ಸ್ವರೂಪಗಳ ಸಂಪೂರ್ಣಶಕ್ತಿಯನ್ನು ಮಾನವರ ಉದ್ಧಾರಕ್ಕಾಗಿ ಸಮೃದ್ಧ ಸಲಿಲವಾಗಿ ಹರಿಸಿದ ಮಹಾನುಭಾವರು. ಅವರಿಂದಾಗಿ ಶಕ್ತಿ ಪಂಥದಲ್ಲಿ ಒಂದು ಹೊಸಯುಗವೇ ಆರಂಭವಾಯಿತು."

ಡೇವಿಡ್ ಫ್ರ್ಯಾಲಿಯವರ ಈ ಅಭಿಪ್ರಾಯದಲ್ಲಿ ಆಳವಾದ ಚಿಂತನೆ ಹಾಗೂ ಚಿರಂತನ ಸತ್ಯ ವ್ಯಕ್ತವಾಗಿದೆ. ಶಕ್ತಿಯ ಹಿಂದಿರುವ ಹಿರಿಮೆಯನ್ನು ವಿವರಿಸುತ್ತಾ ಅವರು "ಶಕ್ತಿಯ ಆರಾಧನೆ ಎಂದರೆ ನಮ್ಮ ಅಂತರ್ಯದಲ್ಲಿರುವ ಆತ್ಮಶಕ್ತಿಯ ಆರಾಧನೆಯೇ. ನಮ್ಮ ಪ್ರಜ್ಞಾಸ್ತರದ ವಿಸ್ತೃತರೂಪದ ಜ್ಞಾನ ನಮಗೆ ಅದರಿಂದ ಪ್ರಾಪ್ತವಾಗುತ್ತದೆ. ಆತ್ಮಸಾಕ್ಷಾತ್ಕಾರದ ಅರುಣೋದಯವಾಗುವುದು ಶಕ್ತಿಮಾತೆಯ ಕೃಪೆಯಿಂದಲೇ" ಎಂದಿದ್ದಾರೆ. ಸ್ವತಃ ತಂತ್ರಸಾಧನೆಯಲ್ಲಿ ಆಳವಾದ ಜ್ಞಾನವಿರುವ ಸಾಧಕರಾದ ಅವರ ಮಾತುಗಳು ಅರ್ಥಪೂರ್ಣವಾದವುಗಳು.

ನವರಾತ್ರಿಯ ಪೂಜಾದಿನಗಳಲ್ಲಿ ಶ್ರೀರಾಮಕೃಷ್ಣರಲ್ಲಿ ದುರ್ಗಾ ದೇವಿಯ ವಿಶೇಷ ಆವಿರ್ಭಾವವಿರುತ್ತಿತ್ತು. ವಚನವೇದದಲ್ಲಿ ಇಂಥ ಪ್ರಸಂಗಗಳು ಹತ್ತಾರು ಕಡೆಗಳಲ್ಲಿ ಕಾಣಬರುತ್ತವೆ. ಒಂದೆರಡು ಪ್ರಸಂಗಗಳನ್ನು ಇಲ್ಲಿ ಸ್ಮರಿಸುವುದು ಹೆಚ್ಚು ಸಮಯೋಚಿತ ಎನ್ನಿಸುತ್ತದೆ.

ಒಮ್ಮೆ ಯದುಮಲ್ಲಿಕನೆಂಬ ಭಕ್ತನ ಮನೆಗೆ ಶ್ರೀರಾಮಕೃಷ್ಣರು ದೇವಿಯ ಪೂಜಾಸಮಯಕ್ಕೆ ಆಹ್ವಾನಿತರಾಗಿ ಬಂದರು. ಸಿಂಹ ವಾಹಿನಿಯಾದ ದೇವಿಯನ್ನು ಹೂವು, ಚಂದನ, ಮಾಲೆಗಳಿಂದ ಬಹಳ ಚೆನ್ನಾಗಿ ಅಲಂಕರಿಸಿದ್ದರು. ಪೀಠದ ಹತ್ತಿರ ದೀಪಗಳನ್ನು ಹಚ್ಚಿಟ್ಟಿದ್ದರು. ದೇವಿ ಆನಂದವನ್ನೇ ಹೊರ ಚೆಲ್ಲುತ್ತಿದ್ದಾಳೆ. ಪರಮಹಂಸರು ಅಲ್ಲಿಗೆ ಬಂದು ದೇವಿಗೆ ಪ್ರಣಾಮ ಮಾಡಿ ಆಕೆಯ ಎದುರು ನಿಂತುಕೊಂಡಿದ್ದಾರೆ. ಬಹಳ ಹೊತ್ತು ಕೈಮುಗಿದು ಕೊಂಡು ನಿಂತಿದ್ದಾರೆ. ಕ್ರಮೇಣ ಸಮಾಧಿಸ್ಥರಾಗುತ್ತಿದ್ದಾರೆ. ಸ್ವಲ್ಪ ಹೊತ್ತಿನ ನಂತರ ಪ್ರಕೃತಿಸ್ಥರಾಗಿ ಪ್ರೇಮೋನ್ಮತ್ತರಾಗಿಯೇ ಹೇಳುತ್ತಿದ್ದಾರೆ: "ತಾಯೆ, ನಾನು ಹೋಗಿಬರುತ್ತೇನೆ." ಆದರೆ ಅವರಿಗೆ ಆ ಸ್ಥಳವನ್ನು ಬಿಟ್ಟು ಹೋಗಲಾಗುತ್ತಲೇ ಇಲ್ಲ.

**ಶ್ರೀರಾಮಕೃಷ್ಣರು ನಿಂತಲ್ಲಿ ನಡೆದಲ್ಲಿ ನಿತ್ಯನವರಾತ್ರಿಯಾಗುತ್ತಿತ್ತು. ಅವರು ಆಡಿದ ಮಾತೆಲ್ಲ ಮಂತ್ರವಾಗುತ್ತಿತ್ತು. ಅವರ ಮುಖ ಮಂಡಲದಲ್ಲಿ ಮಹಾಮಾತೆಯ ಆನಂದಸ್ವರೂಪ ತಾಂಡವವಾಡುತ್ತಿತ್ತು.**

ಈ ಪ್ರಸಂಗ ಕಣ್ಮುಂದೆ ನಿಂತಾಗ ಶ್ರೀರಾಮಕೃಷ್ಣರಲ್ಲಿ ತಾಯಿ ದುರ್ಗೆಯ ವಿಶೇಷ ಆವಿರ್ಭಾವವನ್ನು ಸ್ಪಷ್ಟವಾಗಿ ಕಾಣುತ್ತೇವೆ. ಅವರು ಬಾಯಲ್ಲಷ್ಟೇ ಹೇಳುತ್ತಿದ್ದಾರೆ, "ನಾನು ಹೋಗಿ ಬರುತ್ತೇನೆ" ಎಂಬುದಾಗಿ. ಆದರೆ ಅವರು ಹೋಗಲಾರರು. ದುರ್ಗೆಯಲ್ಲಿ ಅವರು – ಅವರಲ್ಲಿ ದುರ್ಗೆ ಈ ಏಕರೂಪವನ್ನು ಪ್ರತ್ಯೇಕಿಸುವುದು ಅವರಿಗೆ ಸುಲಭವಾಗಿರಲಿಲ್ಲ. ಇಂಥ ಅಪರೂಪದ ದೃಶ್ಯವನ್ನು ಕಂಡ ಭಕ್ತರು ಧನ್ಯರು.

ಇನ್ನೊಮ್ಮೆ ಭಕ್ತ ಸುರೇಂದ್ರ ಮೂರುದಿನಗಳೂ ಭಕ್ತಿಶ್ರದ್ಧೆಗಳಿಂದ ದುರ್ಗೆಯನ್ನು ಪೂಜಿಸಿದ್ದ. ವಿಸರ್ಜಿಸುವ ದಿನ ಬಂದಾಗ ತುಂಬಾ ದುಃಖಿತನಾಗಿದ್ದ. ತೀವ್ರ ಅನಾರೋಗ್ಯದಿಂದಾಗಿ ಶ್ರೀರಾಮಕೃಷ್ಣರು ಅವನ ಮನೆಗೆ ಆ ಸಮಯದಲ್ಲಿ ಬರಲಾಗದೆ ಹೋದದ್ದು ಅವನಿಗೆ ಇನ್ನಷ್ಟು ದುಃಖ ತಂದಿತ್ತು. ಕೊನೆಗೆ ಆ ದುಃಖ ತಾಳಲಾಗದೆ ಶ್ರೀರಾಮಕೃಷ್ಣರಲ್ಲಿಗೆ ಓಡಿಬಂದಿದ್ದ. ಅವರು ಅವನನ್ನು ಸಮಾಧಾನಗೊಳಿಸುತ್ತಾ ಹೇಳಿದರು : "ಅದಕ್ಕೇಕೆ ಇಷ್ಟು ವ್ಯಥೆ? ತಾಯಿಯನ್ನು ಹೃದಯದಲ್ಲಿ ಇಟ್ಟುಕೊಂಡರೆ ಆಯಿತಲ್ಲ! ನಿನ್ನೆ ರಾತ್ರಿ ಸುಮಾರು ಏಳೂವರೆ ಸಮಯದಲ್ಲಿ ನಿನ್ನ ಪೂಜಾಂಗಣವನ್ನು ಭಾವದಲ್ಲಿ ನೋಡಿದೆ. ಪ್ರತಿಮೆ ಜ್ಯೋತಿರ್ಮಯವಾಗಿತ್ತು. ಇಲ್ಲಿಂದ ನಿನ್ನ ಮನೆಯವರೆಗೂ ಒಂದು ಬೆಳಕಿನ ಪ್ರವಾಹ ಹರಿದುನಿಂತಿತ್ತು." ಸುರೇಂದ್ರ ಕಂಬನಿ ಮಿಡಿಯುತ್ತ ಹೇಳಿದ : "ಹೌದು, ನಾನು ಆ ಸಮಯದಲ್ಲಿ ಪೂಜಾಂಗಣದಲ್ಲಿ 'ತಾಯಿ, ತಾಯಿ' ಎಂದು ಅಳುತ್ತಿದ್ದೆ. ನನ್ನ ಮನಸ್ಸಿಗೆ ಅನ್ನಿಸಿತು, ಭಗವತಿ ಹೇಳುತ್ತಿದ್ದಾಳೆ, 'ನಾನು ಮತ್ತೆ ಬರುತ್ತೇನೆ' ಅಂತ."

ಈ ಪ್ರಸಂಗ ಪರಿಶುದ್ಧ ಭಕ್ತಿಯಿಂದ ಆರ್ದ್ರವಾಗಿದೆ. ಪರಮಹಂಸರ ಮಾತೃಹೃದಯ ಭಕ್ತನ ಭಕ್ತಿಗೆ ಮಿಡಿದಿದೆ. ಒಲಿದಿದೆ. ಅವರು ಎಲ್ಲಿದ್ದರೂ ಅಲ್ಲಿಂದಲೇ ಸುರೇಂದ್ರನ ಪೂಜಾಗೃಹದಲ್ಲಿಟ್ಟಿದ್ದ ತಾಯಿಯನ್ನು ಕಂಡಿದ್ದಾರೆ; ಶ್ರೀರಾಮಕೃಷ್ಣರಲ್ಲಿದ್ದ ತಾಯಿ ತಾನಾಗಿ ತಾನೇ ಜ್ಯೋತಿರ್ಮಯವಾದ ಹಾದಿ ನಿರ್ಮಿಸಿಕೊಂಡು ಅಲ್ಲಿಗೆ ನಡೆದು ಬಂದಿದ್ದಾಳೆ; ಪೂರ್ಣ ಕೃಪೆ ಮಾಡಿದ್ದಾಳೆ. ಶ್ರೀರಾಮಕೃಷ್ಣರು ನಿಂತಲ್ಲಿ ನಡೆದಲ್ಲಿ ನಿತ್ಯ ನವರಾತ್ರಿಯಾಗುತ್ತಿತ್ತು. ಅವರು ಆಡಿದ ಮಾತೆಲ್ಲ ಮಂತ್ರವಾಗುತ್ತಿತ್ತು. ಅವರ ಮುಖಮಂಡಲದಲ್ಲಿ ಮಹಾಮಾತೆಯ ಆನಂದಸ್ವರೂಪ ತಾಂಡವವಾಡುತ್ತಿತ್ತು. ಸಾಕಾರ ನಿರಾಕಾರಗಳೆರಡನ್ನೂ ಒಂದೇ ಪರಬ್ರಹ್ಮ ಸ್ವರೂಪವಾಗಿ ಅವರು ಕಂಡರು.

ಜಗತ್ತನ್ನು ಆಳುತ್ತಿರುವ ವಿಶ್ವಚೈತನ್ಯ ಶಕ್ತಿಯಲ್ಲಿ ಧಾರಣ ಅಥವಾ ಸಂರಕ್ಷಣ ಶಕ್ತಿ ಎನ್ನುವುದೊಂದಿದೆ. ಆ ಕ್ರಿಯೆ ಯಾಂತ್ರಿಕವಾದುದಲ್ಲ, ಪ್ರೇಮಮಯವಾದದ್ದು. ಜೀವಿಗಳ ಉದ್ಧಾರಕ್ಕಾಗಿ ಸದಾ ಹಂಬಲಿಸುವ, ಆ ನೆಲೆಯತ್ತ ನಮ್ಮನ್ನು ಕರೆದೊಯ್ಯುವ ಆ ಶಕ್ತಿಯೇ ಮಾತೃಶಕ್ತಿ. ಅದಕ್ಕೆ ನಾವು ನಿಕಟವಾದಷ್ಟೂ ನಮ್ಮ ಬದುಕು ಹದಗೊಂಡು ಪಕ್ವವಾಗುತ್ತಾ ಹೋಗುತ್ತದೆ. ದೂರವಾದಷ್ಟೂ ಬದುಕು ಭಾರವಾಗಿ ಜೀವ ಸಂಸಾರದ ಆಮಿಷಗಳಿಗೆ ಸೆರೆಯಾಗುತ್ತದೆ. ನಿಜವಾದ ದೇವೀ ಉಪಾಸಕರು ನವರಾತ್ರಿಯ ಸಂದರ್ಭದಲ್ಲಿ ಪಾಡ್ಯದಿಂದ ದಶಮಿಯುವರೆಗಿನ ಒಂಭತ್ತು ದಿನಗಳೂ ಆಧ್ಯಾತ್ಮ ಗರ್ಭವಾಸವಾಗಿ ಮಾಡಿಕೊಂಡು ವಿಶೇಷ ರೀತಿಯ ಹೊಸ ಜನ್ಮವನ್ನು ವಿಜಯದಶಮಿಯಂದು ಪಡೆಯುತ್ತಾರೆ.

ದುಷ್ಟಸಂಹಾರಿಣಿಯಾಗಿ, ದುರಿತ ನಿವಾರಿಣಿಯಾಗಿ ದುರ್ಗೆ ಆವಿರ್ಭವಿಸಿದಾಗಲೆಲ್ಲ ಅವಳು ಅಸುರರನ್ನು ಸಂಹರಿಸಿರುವುದು ಜೊತೆಜೊತೆಯಾಗಿಯೇ. ಅಂದರೆ ಶುಂಭ-ನಿಶುಂಭ, ಮಧು-ಕೈಟಭ, ರಕ್ತಬೀಜ-ಮಹಿಷ ಹೀಗೆ. ಅದೇ ರೀತಿ ನಮ್ಮಲ್ಲಿರುವ ಆಸುರೀ ಶಕ್ತಿಗಳು ಜೊತೆಜೊತೆಯಾಗಿಯೇ ಇರುತ್ತವೆ. ಅಹಂ ಇದ್ದಲ್ಲಿ ಅಜ್ಞಾನ, ಸ್ವಾರ್ಥ ಇದ್ದಲ್ಲಿ ದುರಾಸೆ, ಸುಳ್ಳು ಇದ್ದಲ್ಲಿ ವಂಚನೆ ಹೀಗೆ ಬರುತ್ತಲೇ ಇರುತ್ತವೆ. ಆದ್ಯಾಶಕ್ತಿ ಅವನ್ನೆಲ್ಲ ನಿರ್ನಾಮ ಮಾಡಿ ಮುಕ್ತಿದ್ವಾರ ತೆರೆಯುತ್ತಾಳೆ. ನಿತ್ಯನವರಾತ್ರಿಯ ನವದರ್ಶನದ ನವಕಾಂತಿ ಆಗ ಅಲ್ಲಿ ಮೈದೋರುತ್ತದೆ.

**ತಾಯೇ ನೀ ಬಂದಂದು**
**ರೋಮರೋಮವೂ ಜೇನಿನ ಹನಿಯಾಯ್ತು**
**ರೋಮರೋಮವೂ ದೀಪದ ಕುಡಿಯಾಯ್ತು**
**ರೋಮರೋಮವೂ ಆನಂದದ ಅಂಕುರವಾಯ್ತು.**

✳

ಸ್ಥಳದಾನ: ಶ್ರೀಸತ್ಯನಾರಾಯಣ ಟ್ರಾವೆಲ್ಸ್, ಬೆಂಗಳೂರು